# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.569/2022

**DW**:1

**ದಿನಾಂಕ 14.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಪಿ.ಎ.ಡಿ. ವಕೀಲರಿಂದ:**

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಯಲ್ಲಪ್ಪ, 1 ಮತ್ತು 2 ನೇ ಪ್ರತಿವಾದಿಯರು ಹಾಗೂ ವಾದಿ ಇವರ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಭೀರಪ್ಪ ಇವರು ಮರಣ ಹೊಂದಿದ ನಂತರ ವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಬಿಲ್ಲೆಣ್ಣ ಇವರು ನನ್ನ ತಂದೆ. ಸದರಿ ಬಿಲ್ಲೆಣ್ಣ ಇವರು ಮರಣ ಹೊಂದಿದ ನಂತರ ಅವರ ವಾರಸುದಾರರಾದ ಯಲ್ಲಪ್ಪ, ನಾನು, 2 ನೇ ಪ್ರತಿವಾದಿ ಹಾಗೂ ವಾದಿ ಇವರ ಹೆಸರು ದಾವಾ ಆಸ್ತಿಗೆ ದಾಖಲಾಗಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ತಂಗಿ. ಸದರಿ 2 ನೇ ಪ್ರತಿವಾದಿಯ ಮಗಳು ವಾದಿ ಎಂದರೆ ಸರಿ. ಸದರಿ ಭೀರಪ್ಪ ಇವರಿಗೆ 2 ನೇ ಪ್ರತಿವಾದಿಯ ಮಗಳು ವಾದಿಯನ್ನು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಭೀರಪ್ಪನ ಹೆಂಡತಿ ವಾದಿ ಇರುವುದಿಲ್ಲ ಎಂದು ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಭೀರಪ್ಪ ಇವರ ಹೆಂಡತಿ ವಾದಿ ಇಲ್ಲ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಸಾಕ್ಷಿಯು ಆಕೆಯು ಬೇರೆ ಮದುವೆ ಮಾಡಿಕೊಂಡಿರುವ ಕಾರಣ ಬರೆದಿಲ್ಲವೆಂದು ನುಡಿಯುತ್ತಾರೆ. ಸದರಿ ವಾದಿಯು 2 ನೇ ಮದುವೆಯನ್ನು ಮಾಡಿಕೊಂಡು ಹೋಗಿರುತ್ತಾಳೆ ಎಂದು ನಾನು ಲಿಖಿತ ಹೇಳಿಕೆಯಲ್ಲಿ ಮತ್ತು ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಒಂದು ಪಾಲು ಮತ್ತು ವಾದಿಗೆ ಒಂದು ಪಾಲು ಒಟ್ಟಾಗಿ 2 ಪಾಲು ಅವರಿಗೆ ಹೋಗುತ್ತದೆ ಎನ್ನುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯಾ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಲಿಖಿತ ಹೇಳಿಕೆ ಮತ್ತು ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿನ ಅಂಶಗಳು ಒಂದಕ್ಕೊಂದು ತದ್ವಿರುದ್ಧವಾಗಿರುವದರಿಂದ ನಾನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2007 ನೇ ಇಸವಿಯಲ್ಲಿ ನನ್ನ ತಂದೆಯು ಮರಣ ಹೊಂದಿದ್ದು ನಂತರ ವಾರಸಾ ನಾತೆಯಿಂದ ವಾದಿ, ಯಲ್ಲಪ್ಪ, 2 ನೇ



ಪ್ರತಿವಾದಿ ಹಾಗೂ ನನ್ನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಆ ಪ್ರಕಾರ ತಹಶೀಲ್ದಾರ ಕಚೇರಿಯಲ್ಲಿ ನಿ.ಪಿ.12 ರಂತೆ MR No.297/2007-08 ಎಂದು ದಾಖಲಾಗಿರುತ್ತದೆ ಎಂದರೆ

ಸರಿ. 2007 ರಲ್ಲಿ ನಾವು ವಾದಿಯ ಹೆಸರು ದಾಖಲಾಗುವಾಗ ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ. ವಾದಿಯು 2 ನೇ ಮದುವೆಯಾಗಿರುತ್ತಾಳೆ ಎಂದು ತೋರಿಸಲು ನಾನು ಲಗ್ನಪತ್ರಿಕೆ, ವಾದಿಯ 2 ನೇ ಗಂಡನ ಹೆಸರು, ವಿಳಾಸಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.